ಹೊನ್ನಾವರದಲ್ಲಿ ಬಸ್ ಡಿಪೋ ತೆರೆಯುವುದು

832 (898) ಶ್ರೀ ದಿನಕರ ಕೇಶವ ಶೆಟ್ಟಿ (ಕುಮಟ) : ಮಾನ್ಯ ಗೃಹ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಮಟಾ ಕ್ಷೇತ್ರದ ಹೊನ್ನಾವರದಲ್ಲಿ ಬಸ್ ಡೀಪೋ ತೆರೆಯುವ ಪ್ರಸ್ತಾವನೆ ಸರಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಇನ್ನೂ ಬಸ್ ಡೀಪೋ ತೆರೆಯದಿರಲು ಕಾರಣಗಳೇನು, ಮಾಹಿತಿ ನೀಡುವುದು?

ಶ್ರೀ ಆರ್. ಅಶೋಕ (ಗೃಹ ಮತ್ತು ಸಾರಿಗೆ ಸಚಿವರು) :

ಅ) ಇಲ್ಲ.

ಆ) ಉತ್ತರ ಕನ್ನಡ ಜಿಲ್ಲೆಯ ಕುಮಟಾ ಮತ್ತು ಭಟ್ಕಳಗಳಲ್ಲಿ ಸಂಸ್ಥೆಯ ಘಟಕಗಳಿದ್ದು ಈ ಘಟಕಗಳಿಂದ ಪ್ರಯಾಣಿಕರ ಅವಶ್ಯಕತೆಗನು ಗುಣವಾಗಿ ಹೊನ್ನಾವರ ಹಾಗೂ ಸುತ್ತ ಮುತ್ತಲಿನ ಹಳ್ಳಿಗಳಿಗೆ ಕಾರ್ಯಾ ಚರಣೆಯನ್ನು ಮಾಡಲಾಗುತ್ತಿರುವುದರಿಂದ ಸದ್ಯಕ್ಕೆ ಹೊನ್ನಾವರದಲ್ಲಿ ಬಸ್ ಡಿಪೋ(ಘಟಕ) ತೆರೆಯುವ ಪ್ರಸ್ತಾವನೆ ಇರುವುದಿಲ್ಲ.

ಕುಮಟದಲ್ಲಿ ಗ್ಯಾಸ್ ಸಿಲಿಂಡರ್ ಕೊರತೆ

833 (899) ಶ್ರೀ ದಿನಕರ ಕೇಶವ ಶೆಟ್ಟಿ (ಕುಮಟ) : ಮಾನ್ಯ ಇಂಧನ ಮತ್ತು ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಮಟಾದಲ್ಲಿ ಗ್ಯಾಸ್ ಸಿಲಿಂಡರ್ ಕೊರತೆಯನ್ನು ಎದುರಿಸು ತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಸಮಸ್ಯೆಯನ್ನು ನೀಗಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು ಮಾಹಿತಿ ನೀಡುವುದು?